ಕ್ಷಣ ಕ್ಷಣದ ಸುದ್ದಿಗಾಗಿ ವಿಶ್ವವಾಣಿ timely ಆ್ಯಪ್ ಡೌನ್‌ಲೋಡ್ ಮಾಡಿ

ವಿಶ್ವವಾಣಿ
ಬೆಂಗಳೂರು
vishwavani.news
13.06.2018 ಬುಧವಾರ

ಟ್ವೀಟು ಖಾರ

- ಡಾ. ಜಿ. ಪರಮೇಶ್ವರ
@Dr.G Parameshwara

ಬಿಬಿಎಂಪಿ ಸಭೆಯಲ್ಲಿ ಅಧಿಕಾರಿಗಳ ಜತೆ ನಗರದ ರಸ್ತೆಗಳ ಬಗ್ಗೆ ಚರ್ಚಿಸಿ ಮಾಹಿತಿ ಪಡೆದಿದ್ದೇನೆ. ರಸ್ತೆಗಳ ದೊಡ್ಡ ಗಾತ್ರದ ಗುಂಡಿಗಳನ್ನು ಪೈಥಾನ್ ಯಂತ್ರಗಳ ಮೂಲಕ ಮುಚ್ಚುವ ಕೆಲಸ ಈಗಾಗಲೇ ಆರಂಭಗೊಂಡಿದೆ. ಇದು ಶೀಘ್ರವೇ ಪೂರ್ಣಗೊಳ್ಳಲಿದೆ. ಜನರ ಕ್ಷೇಮವೇ ನಮ್ಮ ಗುರಿ.

-ಪ್ರಹ್ಲಾದ್ ಜೋಶಿ
@Joshi Prahlad

ಆಗ ವೀರಾವೇಶ ತೋರಿದ್ದ ಡಿ.ಕೆ ಶಿವಕುಮಾರ್ ಮತ್ತು ಕುಮಾರಣ್ಣ ಅಪ್ರತಿಮರು ಇಂದು 'ಆತ್ಮೀಯ ಗೆಳೆಯರು' ಬಡವರಿಗೆ ನ್ಯಾಯ ದೊರಕೀತೆ? ಭೂಗಳ್ಳರನ್ನು ಶಿಕ್ಷಿಸುವರೇ? 'ಉತ್ತರ' ಕೊಡಿ ಕುಮಾರಸ್ವಾಮಿ ಅವರೆ?

-ಸಿದ್ದರಾಮಯ್ಯ
@siddaramaiah

ರಂಜಾನ್ ಪ್ರಯುಕ್ತ ಬಾದಾಮಿಯಲ್ಲಿ ಆಯೋಜಿಸಿದ್ದ ಇಫ್ತಾರ್ ಕೂಟದಲ್ಲಿ ಭಾಗವಹಿಸಿದೆ. ಜಾತಿ ಧರ್ಮದ ಬೇಧವಿಲ್ಲದೆ ಎಲ್ಲರೂ ಕಲೆತು ಉಣ್ಣುವ ಇಫ್ತಾರ್ ಸ್ನೇಹ ಸೌಹಾರ್ದತೆಯ ಹಬ್ಬ.

- ಅರವಿಂದ ಲಿಂಬಾವಳಿ
@bjparavind

ಬೆಂಗಳೂರನ್ನು ಗಾರ್ಬೇಜ್ ಸಿಟಿ ಮಾಡಲು ಹೊರಟಿದೆ ಜೆಡಿಎಸ್-ಕಾಂಗ್ರೆಸ್ ಸರಕಾರ. ಕಸ ವಿಲೇವಾರಿ ಮಾಡುವಲ್ಲಿ ಬಿಬಿಎಂಪಿ ವಿಫಲವಾಗಿದ್ದು ಕಸ ವಿಲೇವಾರಿ ಮಾಡುವವರ ಬೇಡಿಕೆಗಳನ್ನೂ ಈಡೇರಿಸದೇ ಕಡೆಗಣಿಸಿದ್ದಾರೆ. ಅವರೆಲ್ಲ ಪ್ರತಿಭಟನೆ ಕೈಗೊಂಡಿದ್ದು ಕಸವಿಲೇವಾರಿ ಸ್ಥಗಿತಗೊಂಡಿದೆ.

- ಎಂ.ಬಿ. ಪಾಟೀಲ
@reachmbp

ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು 2025 ವೇಳೆಗೆ ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆಗೊಳಿಸುವ ಸುಸ್ಥಿರ ಅಭಿವೃದ್ಧಿ ಗುರಿಗಳ ಟಾರ್ಗೆಟ್ 8.7 ಅಂಶವನ್ನು ಸಾಧಿಸುವ ಕ್ರಮಗಳನ್ನು ವೇಗಗೊಳಿಸುವ ಗುರಿಯನ್ನು ಹೊಂದಿದೆ. ನಾವೆಲ್ಲರೂ ಕಾಳಜಿಯನ್ನು ಬೆಂಬಲಿಸೋಣ.

ಕ್ಷಣ ಕ್ಷಣದ ಸುದ್ದಿಗಾಗಿ
ವಿಶ್ವವಾಣಿ timely
ಗೂಗಲ್ ಪ್ಲೇಸ್ಟೋರ್‌ನಿಂದ ಡೌನ್‌ಲೋಡ್ ಮಾಡಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿ

ಸೋಲಿನ ಕಹಿಯನ್ನು ಪರೋಕ್ಷವಾಗಿ ಹೊರ ಹಾಕಿದ ಸಿದ್ದರಾಮಯ್ಯ | ಸೋತಾಗ ಕುಗ್ಗಿಲ್ಲ, ಗೆದ್ದಾಗ ಹಿಗ್ಗಿಲ್ಲ ಎಂದ ಮಾಜಿ ಸಿಎಂ

ತಿಂಗಳ ಬಳಿಕ ತವರಿಗೆ ಬಂದ ಸಿದ್ದರಾಮಯ್ಯ

ಕೆ.ಬಿ.ರಮೇಶನಾಯಕ ಮೈಸೂರು

ಇಡೀ ದೇಶದ ಗಮನಸೆಳೆದಿದ್ದ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಅಧಿಕಾರಕ್ಕೆ ತರುವ ಕನಸು ನುಚ್ಚು ನೂರಾಗುವ ಜತೆಗೆ ಸ್ವತಃ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಪರಾಭವಗೊಂಡು ದೂರ ಉಳಿದಿದ್ದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಂಗಳ ಬಳಿಕ ತವರು ಜಿಲ್ಲೆಗೆ ಕಾಲಿಟ್ಟರು.

ಮುಖ್ಯಮಂತ್ರಿಯಾಗಿದ್ದಾಗ ಫಲಿತಾಂಶಕ್ಕೂ ಮುನ್ನ ಇದ್ದ ಜೋಶ್, ಸಂಭ್ರಮದ ಗಮ್ಮತ್ತು ಅವರ ಮುಖದಲ್ಲಿ ಕಾಣಿಸದೆ ಚಾಮುಂಡೇಶ್ವರಿ ಕ್ಷೇತ್ರದ ಸೋಲಿನ ಛಾಯೆಯ ಭಾವನೆ ದೂರಾಗದೆ ಇದ್ದಿದ್ದು ಸ್ಪಷ್ಟವಾಗಿ ಗೋಚರವಾಗುತ್ತಿತ್ತು. ಸಿದ್ದರಾಮಯ್ಯ ಅಂದ್ರೆ ಗತ್ತು, ಗತ್ತು ಅಂದ್ರೆ ಸಿದ್ದರಾಮಯ್ಯ ಅನ್ನುವುದು ರಾಜಕೀಯ ವಲಯದಲ್ಲಿ ಸದಾ ಚಾಲ್ತಿಯಲ್ಲಿರುವ ಮಾತು. ಅದರಲ್ಲೂ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಮೈಸೂರಿಗೆ ಬಂದಾಗಲೆಲ್ಲ ಅವರ ಉತ್ಸಾಹ, ಖುಷಿ ತುಸು ಜಾಸ್ತಿಯಾಗಿ ಕಾಣಿಸಿತ್ತು. ಸಿದ್ದರಾಮಯ್ಯ ಅವರು ಮೈಸೂರಿಗೆ ಬರುತ್ತಾರೆಂದರೇ ಹತ್ತಾರು ಮುಖಂಡರು, ನೂರಾರು ಬೆಂಬಲಿಗರು ಮಂಡಕಳ್ಳಿ ವಿಮಾನ ನಿಲ್ದಾಣದ ಬಳಿ ಕಾದು ನಿಲ್ಲುತ್ತಿದ್ದರು. ಅವರನ್ನ ಮಾತನಾಡಿಸಲು ಹರಸಾಹಸಪಡುತ್ತಿದ್ದರು. ಆದರೆ, ಕಳೆದ ತಿಂಗಳ 12ರಂದು ನಡೆದ ರಾಜ್ಯ ವಿಧಾನಸಭಾ ಚುನಾವಣೆಯ ಮತದಾನ ಮುಗಿದ ಬಳಿಕ 13ರಂದು ಮೈಸೂರಿನಿಂದ ನಿರ್ಗಮಿಸಿದ್ದರು.

ಸ್ವಜಿಲ್ಲೆಗೆ ಹೋಗಲು ಹಿಂದೇಟು ಹಾಕಿದ್ದ ಸಿದ್ದರಾಮಯ್ಯ: ಫಲಿತಾಂಶದ ದಿನದಂದು ಮೈಸೂರಿಗೆ ಬರುತ್ತೇನೆ ಎಂದು ಬೆಂಬಲಿಗರಿಗೆ ಟಾಟಾ ಮಾಡಿ ತೆರಳಿದ್ದ ಸಿದ್ದರಾಮಯ್ಯ, ತಮ್ಮ ಎದುರಾಳಿ ಜೆಡಿಎಸ್‌ನ ಜಿ.ಟಿ.ದೇವೇಗೌಡರ ವಿರುದ್ಧ ಭಾರೀ ಮತಗಳ ಅಂತರದಿಂದ ಸೋಲು ಕಂಡರು. ನನ್ನ ರಾಜಕೀಯ ಆರಂಭವಾದ ಕ್ಷೇತ್ರದಲ್ಲೇ ಕೊನೆಯ ಚುನಾವಣೆ ಅಂಥ ಘೋಷಿಸಿದ್ದ ಇವರಿಗೆ ಸೋಲು ಕಂಡಿದ್ದು ಅರಗಿಸಿಕೊಳ್ಳಲಾಗದ ಸ್ಥಿತಿಯಾಗಿತ್ತು. ಇದರಿಂದ ಸ್ವಜಿಲ್ಲೆಗೆ ಆಗಮಿಸಲು ಹಿಂದೇಟು ಹಾಕಿದ್ದರು.

ಇದೆಲ್ಲದರ ನಡುವೆ ಪುತ್ರ ಡಾ. ಯತೀಂದ್ರ, ಅವರನ್ನ ಗೆಲ್ಲಿಸಿದ ವರುಣಾ ಕ್ಷೇತ್ರದ ಜನತೆಗೆ ಕೃತಜ್ಞತೆ ಸಲ್ಲಿಸಬೇಕಾದ ಕಾರಣ ಜಯಮ್ಮ ಗೋವಿಂದೇಗೌಡ ಕಲ್ಯಾಣಮಂಟಪದಲ್ಲಿ ಕೃತಜ್ಞತಾ ಸಮಾರಂಭ ಆಯೋಜಿಸಲಾಗಿತ್ತು. ಬಾದಾಮಿ ಕ್ಷೇತ್ರದಲ್ಲಿ ಐದು ದಿನಗಳು ಪ್ರವಾಸ ನಡೆಸಿ ಕೃತಜ್ಞತೆ ಸಲ್ಲಿಸಿ, ನೇರವಾಗಿ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಬಂದಿಳಿದರು. ಬೆಳಗ್ಗೆ 8.30ಕ್ಕೆ ಬರಬೇಕಿದ್ದ ಸಿದ್ದರಾಮಯ್ಯ ಅರ್ಧ ಗಂಟೆ ಮುಂಚಿತವಾಗಿಯೇ ಆಗಮಿಸಿದರು.

ಮನೆಯಲ್ಲಿ ನೀರವ ಮೌನ: ಸಿದ್ದರಾಮಯ್ಯ ಅವರು ಬರುತ್ತಾರೆ ಹಾಗೂ ಮನೆಯಲ್ಲಿ ಎಂದರೆ ತೊಣಚಿಕೊಪ್ಪಲಿನಲ್ಲಿರುವ ನಿವಾಸ ಸದಾ ಗಿಜಿಗುಡುತ್ತಿತ್ತು. ಆದರೆ, ಸಿಎಂ ಅವರು ಮನೆಗೆ ಬಂದಾಗ ಆಪ್ತ ಸಹಾಯಕ ಕುಮಾರ್ ಸೇರಿ ಕೆಲವೇ ಮಂದಿ ಇದ್ದರು. ಅವರ ಮನೆಯ ಎದುರು ಹಾಕಿದ್ದ ಬ್ಯಾರಿಕೇಡ್ ತೆರವುಗೊಳಿಸಿದ್ದರು. ಹೀಗಾಗಿ, ಪೊಲೀಸರು ಸಹ ಇರಲಿಲ್ಲ. ಮಾಜಿ ಸಿಎಂಗೆ ಶಿಷ್ಟಾಚಾರದ ಪ್ರಕಾರ ಭದ್ರತೆ ಪಡೆಯ ವಾಹನದ ಪೊಲೀಸರು ಬಿಟ್ಟರೆ ಇತರೆ ಪೊಲೀಸರು ಇರಲಿಲ್ಲ.

ವರುಣಾ ಕ್ಷೇತ್ರದಲ್ಲಿ ಪುತ್ರ ಡಾ. ಯತೀಂದ್ರ ಗೆಲುವಿಗೆ ಆಯೋಜಿಸಿದ್ದ ಕೃತಜ್ಞತಾ ಸಮಾರಂಭದಲ್ಲಿ ಸಿದ್ದರಾಮಯ್ಯ ಭೋಜನ ಸವಿದರು.

- ಎದ್ದು ಕಾಣುತ್ತಿದ್ದ ಚಾಮುಂಡೇಶ್ವರಿ ಕ್ಷೇತ್ರದ ಸೋಲಿನ ಛಾಯೆ
- ಸಿದ್ದರಾಮಯ್ಯರನ್ನು ಮಾತನಾಡಿಸಲು ಹರಸಾಹಸಪಡುತ್ತಿದ್ದ ಬೆಂಬಲಿಗರು
- ಮಾಜಿ ಸಿಎಂ ಮನೆ ಮುಂದೆ ಇದ್ದ ಬ್ಯಾರಿಕೇಡ್ ತೆರವು

> ನನ್ನ ಸೋಲಿನಿಂದ ಎದೆಗುಂದಿಲ್ಲ. ನಮ್ಮ ಯೋಜನೆಗೆ ಮನ್ನಣೆ ನೀಡಲಿಲ್ಲವಲ್ಲ ಎಂಬ ವಿಚಾರಕ್ಕೆ ತುಂಬ ನೋವಿದೆ. ಸೋತಾಗ ಕುಗ್ಗಿಲ್ಲ, ಗೆದ್ದಾಗ ಹಿಗ್ಗಿಲ್ಲ. ನಾನು ಚುನಾವಣೆಗೆ ನಿಲ್ಲುವ ಮುನ್ನ ಹೇಗಿದ್ದೆನೋ, ಮುಖ್ಯಮಂತ್ರಿ ಆದಾಗಲೂ ಹಾಗೆಯೇ ಇದ್ದುಕೊಂಡು ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇನೆ.
>
> **-ಸಿದ್ದರಾಮಯ್ಯ** ಮಾಜಿ ಮುಖ್ಯಮಂತ್ರಿ

ಬಿಎಸ್‌ವೈ ಮಾತಿಗೆ ಕವಡೆ ಕಾಸಿನ ಕಿಮ್ಮತ್ತಿಲ್ಲ

ಅತೃಪ್ತರು ತಮ್ಮೊಂದಿಗೆ ಸಂಪರ್ಕದಲ್ಲಿ ಇರುವುದಾಗಿ ಹೇಳಿರುವ ಪ್ರತಿಪಕ್ಷದ ನಾಯಕ ಬಿ.ಎಸ್. ಯಡಿಯೂರಪ್ಪ ಮಾತಿಗೆ ಕವಡೆ ಕಾಸಿನ ಕಿಮ್ಮತ್ತಿಲ್ಲ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದರು.

ಜನರೇ ಟೋಪಿ ಹಾಕಿದ್ರು

ಫಲಿತಾಂಶಕ್ಕೂ ಮುನ್ನ ಇದ್ದ ಜೋಶ್, ಸಂಭ್ರಮದ ಗಮ್ಮತ್ತು ಅವರ ಮುಖದಲ್ಲಿ ಕಾಣಿಸದೆ ಚಾಮುಂಡೇಶ್ವರಿ ಕ್ಷೇತ್ರದ ಸೋಲಿನ ಛಾಯೆಯ ಭಾವನೆ ದೂರಾಗದೆ ಇದ್ದಿದ್ದು ಸ್ಪಷ್ಟವಾಗಿ ಕಾಣುತ್ತಿತ್ತು. ಅಭಿಮಾನಿಯೊಬ್ಬರು ಮೈಸೂರು ಪೇಟ ತೊಡಿಸಿ ಸನ್ಮಾನ ಮಾಡಿದ್ರು. ಇದೆಲ್ಲ ಯಾಕಪ್ಪ, ಜನರೇ ಟೋಪಿ ಹಾಕಿದ್ದಾರೆ ಅಂಥ ವ್ಯಂಗವಾಗಿ ಹೇಳುತ್ತಲೇ ಸೋಲಿನ ಕಹಿಯನ್ನ ಪರೋಕ್ಷವಾಗಿ ಹೊರ ಹಾಕಿದ್ರು.

ಸಮಾಚಾರ ಸಣ್ಣದಲ್ಲ

ಸಮನ್ವಯಕಾರನಾಗಿ ಬೈಕೆರೆ ನಾಗೇಶ್ ನೇಮಕ

ಹಾಸನ: ಕೇಂದ್ರ ಸರಕಾರದ ನಿವೃತ್ತ ಹಿರಿಯ ಅಧಿಕಾರಿ ಬೈಕೆರೆ ನಾಗೇಶ್‌ರನ್ನು ದೆಹಲಿಯಲ್ಲಿ ಕರ್ನಾಟಕ ಸರಕಾರದ ವಿಶೇಷ ಸಮನ್ವಯಕಾರರನ್ನಾಗಿ ರಾಜ್ಯ ಸರಕಾರ ನೇಮಕ ಮಾಡಿ ಆದೇಶ ಹೊರಡಿಸಿದೆ. ಬೈಕೆರೆ ನಾಗೇಶ್ ಅವರು ಸುಮಾರು 20 ವರ್ಷಗಳು ಕೇಂದ್ರದ ನಾನಾ ಸಚಿವಾಲಯಗಳಲ್ಲಿ ಹಿರಿಯ ಅಧಿಕಾರಿಯಾಗಿ ಸೇವೆ ಸಲ್ಲಿಸಿ ಎಲ್ಲರ ಪ್ರಶಂಸೆಗೆ ಪಾತ್ರರಾಗಿದ್ದಾರೆ. 2009ರಲ್ಲಿ ಅಂದಿನ ಸರಕಾರ ಇವರನ್ನು ದೆಹಲಿಯಲ್ಲಿ ಕರ್ನಾಟಕ ರಾಜ್ಯದ ಹೆಚ್ಚುವರಿ ವಿಶೇಷ ಪ್ರತಿನಿಧಿಯನ್ನಾಗಿ ನಂತರ ರಾಜ್ಯ ಸರಕಾರದ ವಿಶೇಷ ಸಮನ್ವಯಕಾರನ್ನಾಗಿ ನೇಮಕ ಮಾಡಿತ್ತು.

ರೈಲ್‌ಗೆ ಸಿಕ್ಕಿ ಶಾಲಾ ಬಾಲಕಿ ಸಾವು

ಸಾಗರ: ರೈಲ್ವೆ ಕಾಮಗಾರಿಗಳ ಸಾಮಗ್ರಿ ಹೊತ್ತು ಶಿವಮೊಗ್ಗ ಕಡೆ ಬರುತ್ತಿದ್ದ ರೈಲಿಗೆ ಸಿಕ್ಕಿ ಶಾಲಾ ಬಾಲಕಿ ಮೃತಪಟ್ಟಿದ್ದಾರೆ. ಆನಂದಪುರ ಸಮೀಪದ ಅಂದಾಸುರದ ಸರಕಾರಿ ಶಾಲೆಯಲ್ಲಿ 4ನೇ ತರಗತಿ ಓದುತ್ತಿದ್ದ ಕೀರ್ತನಾ(10) ಮೃತ ಬಾಲಕಿ. ಕೂಲಿಕಾರ್ಮಿಕ ಪ್ರಕಾಶ್ ಅವರ ಪುತ್ರಿ, ಕೀರ್ತನಾ ಮಂಗಳವಾರ ಬೆಳಗ್ಗೆ ಎಂದಿನಂತೆ ರೈಲ್ವೆ ಹಳಿ ಬಳಸಿ ಒಳ ದಾರಿಯಲ್ಲಿ ಶಾಲೆಗೆ ಹೋಗುತ್ತಿದ್ದ ವೇಳೆ ಈ ದುರ್ಘಟನೆ ಸಂಭವಿಸಿದೆ. ಬಾಲಕಿಯನ್ನು ತಕ್ಷಣ ಆನಂದಪುರ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ ನಂತರ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಕೀರ್ತನಾ ಮೃತಪಟ್ಟಿದ್ದಾರೆ.

ನಂದಿಬೆಟ್ಟದಿಂದ ಬಿದ್ದು ಗೃಹಿಣಿ ಆತ್ಮಹತ್ಯೆ

ದಾವಣಗೆರೆ: ಪತಿಯ ಕಿರುಕುಳಕ್ಕೆ ಬೇಸತ್ತ ಯುವತಿಯೊಬ್ಬಳು ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಬೆಟ್ಟದಿಂದ ಹಾರಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ನಗರದ ಡಾಂಗೆಪಾರ್ಕ್ ಬಳಿಯ ಶಿಕ್ಷಕಿ ಮಂಜುಳಾ ಅವರ ಪುತ್ರಿ ಸ್ಮಿತಾ (26) ಮೃತ ಗೃಹಿಣಿ. ಈಕೆಯನ್ನು ತಾಲೂಕಿನ ಹದಡಿ ಗ್ರಾಮದ ಯುವಕನೊಂದಿಗೆ ವಿವಾಹ ಮಾಡಿಕೊಡಲಾಗಿತ್ತು. ಆದರೆ, ಪತಿಯ ಕಿರುಕುಳ ಹಾಗೂ ಉದಾಸೀನತೆಯಿಂದ ಬೇಸತ್ತು ತೀವ್ರ ಮನನೊಂದಿದ್ದಳು ಎನ್ನಲಾಗಿದ್ದು, ಈ ಕುರಿತು ಈಚೆಗೆ ಹದಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಜತೆಗೆ ರಾಜಿ ಸಂಧಾನ ಕೂಡ ಮಾಡಲಾಗಿತ್ತು. ಈ ಕುರಿತು ಚಿಕ್ಕಬಳ್ಳಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೇಲ್ಮನೆ ಮಾಜಿ ಸದಸ್ಯ ನಾರಾಯಣಸ್ವಾಮಿ ನಿಧನ

ತುಮಕೂರು: ವಿಧಾನ ಪರಿಷತ್‌ನ ಮಾಜಿ ಮುಖ್ಯ ಸಚೇತಕ, ಕಾಳಿದಾಸ ವಿದ್ಯಾವರ್ಧಕ ಸಂಘ, ಕನಕ ಪತ್ತಿನ ಸಹಕಾರ ಸಂಘದ ಮಾಜಿ ನಿರ್ದೇಶಕ ಟಿ. ಎಚ್ .ನಾರಾಯಣ ಸ್ವಾಮಿ ಹೃದಯಾಘಾತದಿಂದ ತಮ್ಮ ಸ್ವಗೃಹದಲ್ಲಿ ನಿಧನರಾದರು. ನಾರಾಯಣಸ್ವಾಮಿ ನಿಧನದ ಸುದ್ದಿ ತಿಳಿಯುತ್ತಿದ್ದಂತೆ ಉಪ ಮುಖ್ಯಮಂತ್ರಿ ಡಾ. ಜಿ.ಪರಮೇಶ್ವರ್ ಅಂತಿಮ ದರ್ಶನ ಪಡೆದರು. ನಗರದ ಕುಣಿಗಲ್ ರಸ್ತೆಯಲ್ಲಿರುವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು.

ಪ್ರತಿಯೊಂದನ್ನೂ ಜಾತಿ ದೃಷ್ಟಿಯಿಂದ ನೋಡುವುದು ತಪ್ಪು

ರಾಮನಗರ: ಅಧಿಕಾರ ಹಂಚಿಕೆ ವೇಳೆ ಎಲ್ಲ ಸಮುದಾಯಕ್ಕೂ ಪ್ರಾತಿನಿಧ್ಯ ನೀಡುವುದು ತಪ್ಪಲ್ಲ. ಆದರೆ, ಅದೇ ಮುಖ್ಯವಾಗಬಾರದು ಎಂದು ಉಡುಪಿ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿ ಅಸಮಧಾನ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಸ್ವಾತಂತ್ರ್ಯ ಭಾರತದ ಪ್ರಾರಂಭದಲ್ಲಿ ಇಷ್ಟೊಂದು ಜಾತಿ ಲೆಕ್ಕಾಚಾರವಿರಲಿಲ್ಲ. ಯಾವುದು ಅಳಿಯಬೇಕಿತ್ತೋ ಈಗ ಅದೇ ಹೆಮ್ಮರವಾಗಿ ಬೆಳೆದಿದೆ. ಪ್ರತಿಯೊಂದನ್ನೂ ಜಾತಿ ದೃಷ್ಟಿಯಿಂದ ನೋಡುವುದು ತಪ್ಪು ಎಂದು ಜಾತಿ ರಾಜಕೀಯ ಲೆಕ್ಕಾಚಾರದ ಬಗ್ಗೆ ಶ್ರೀಗಳು ಬೇಸರ ವ್ಯಕ್ತಪಡಿಸಿದರು. ಎಲ್ಲ ಪಕ್ಷದವರು ನಮ್ಮ ಸಂಪರ್ಕದಲ್ಲಿ ದ್ದಾರೆ. ನಾವು ನಾಡಿನ, ಸರ್ವ ಜನರ ಹಿತದೃಷ್ಟಿಯಿಂದ ಸಲಹೆ ನೀಡುತ್ತೇವೆ. ಪಕ್ಷ ರಾಜಕೀಯದಲ್ಲಿ ನಾವಾಗಿಯೇ ಪ್ರವೇಶಿಸುವುದಿಲ್ಲ. ಅಂತೆಯೇ ಸಮಾಜದ ಹಾಗೂ ಧರ್ಮದ ಒಳಿತಿಗಾಗಿ ಕೆಲ ತಪ್ಪುಗಳನ್ನು ತಿದ್ದುವ ಕೆಲಸವನ್ನೂ ಮಾಡುತ್ತೇವೆ ಎಂದರು. ನಾವು ಇಫ್ತಿಯಾರ್ ಕೂಟ ಎಂದು ಕರೆಯುವುದಿಲ್ಲ, ನಮ್ಮದು ಸ್ನೇಹಕೂಟ, ಸಹಭೋಜನ. ಇದೇ ವರ್ಷ ಸರ್ವ ಧರ್ಮೀಯರನ್ನು ಆಹ್ವಾನಿಸಿ ಭೋಜ ಆಯೋಜಿಸುತ್ತೇವೆ. ಸಹಭೋಜನ ಇದೇ ತಿಂಗಳು ಆಗಬೇಕು ಎಂದಿಲ್ಲ, ಯಾವಾಗ ಬೇಕಾದರೂ ನಡೆಯಬಹುದು ಎಂದರು.

ಎಚ್.ಕೆ. ಪಾಟೀಲ್ ಬಣಕ್ಕೆ ಸಿಕ್ಕಿತು ಭರವಸೆ

ಬೆಂಗಳೂರು: ಮಾಜಿ ಸಚಿವ ಎಂ.ಬಿ. ಪಾಟೀಲ್ ಅವರ ಅತೃಪ್ತ ಬಣದ ಬಂಡಾಯ ಶಮನವಾದರೂ ಮತ್ತೊಬ್ಬ ಹಿರಿಯ ನಾಯಕ ಎಚ್.ಕೆ.ಪಾಟೀಲ್ ಬಣದ ಬಂಡಾಯ ಸಭೆ ಮಂಗಳವಾರ ನಡೆದಿದ್ದು, ಅಂತಿಮವಾಗಿ ಎಐಸಿಸಿ ಭರವಸೆಯಲ್ಲಿ ಬಂಡಾಯ ಸಭೆ ಅಂತ್ಯಗೊಂಡಿದೆ. ಬೆಂಗಳೂರಿನ ಎಚ್.ಕೆ.ಪಾಟೀಲ್ ನಿವಾಸದಲ್ಲಿ ನಡೆದ ಸಭೆಯಲ್ಲಿ, ಸಂಪುಟದಲ್ಲಿ ಸಚಿವ ಸ್ಥಾನ ಕೈ ತಪ್ಪಿದ್ದಕ್ಕೆ ಅಸಮಾಧಾನಗೊಂಡ 8- 10 ಶಾಸಕರು ಹಾಜರಿದ್ದರು. ಈ ವೇಳೆ ಯಾವುದೇ ಕಾರಣಕ್ಕೂ ಪಕ್ಷ ಬಿಡುವ ಅಥವಾ ಸರಕಾರ ಅತಂತ್ರಗೊಳಿಸುವ ಬದಲು, ಎಂಟು ಶಾಸಕರ ಪೈಕಿ ಕನಿಷ್ಠ ಎರಡರಿಂದ ಮೂವರಿಗೆ ಸ್ಥಾನ ನೀಡುವಂತೆ ಹೈಕಮಾಂಡ್ ಮೇಲೆ ಒತ್ತಡ ಹೇರುವ ನಿರ್ಧಾರಕ್ಕೆ ಬರಲಾಗಿದೆ ಎಂದು ತಿಳಿದುಬಂದಿದೆ.

ಸಭೆಯಲ್ಲಿ ಪ್ರಮುಖವಾಗಿ ಬಾಗೇಪಲ್ಲಿ ಶಾಸಕ ಸುಬ್ಬಾರೆಡ್ಡಿ, ಶಹಾಪುರ ಶಾಸಕ ಶರಣಬಸಪ್ಪ ದರ್ಶನಾಪುರ, ಮಾಜಿ ಸಚಿವ ಈಶ್ವರ ಖಂಡ್ರೆ, ವಿಧಾನಪರಿಷತ್ ಸದಸ್ಯ ಬಸವರಾಜ್ ಪಾಟೀಲ್ ಇಟಗಿ, ಉಮೇಶ್ ಜಾಧವ್ ಭಾಗವಹಿಸಿದ್ದರೆ, ಪಕ್ಷದ ಪರವಾಗಿ ಎಚ್‌ಕೆ ಪಾಟೀಲರನ್ನು ಸಂತೈಸಲು ರಾಜ್ಯಸಭಾ ಸದಸ್ಯ ಹಾಗೂ ಪರಮೇಶ್ವರ ಅವರ ಆಪ್ತ ಜಿ.ಸಿ ಚಂದ್ರಶೇಖರ್ ಭಾಗವಹಿಸಿದ್ದರು.

ಸಭೆಯಲ್ಲಿ ಚಂದ್ರಶೇಖರ್, ಅತೃಪ್ತ ನಾಯಕರಿಗೆ ಈ ರೀತಿ ಸಭೆ ನಡೆಸುವುದು ಬೇಡ. ಪಕ್ಷದ ವೇದಿಕೆಯಲ್ಲಿ ಎಲ್ಲರೂ ಕುಳಿತು ಚರ್ಚಿಸೋಣ ಎಂದು ಮನವಿ ಮಾಡಿದ್ದಾರೆ.

ಬಳಿಕ ಮಾತನಾಡಿದ ಅವರು, ಎಚ್.ಕೆ ಪಾಟೀಲರನ್ನು ಸಮಾಧಾನ ಮಾಡಲು ಬಂದಿಲ್ಲ. ಅವರೊಂದಿಗೆ ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ ದೂರವಾಣಿ ಮೂಲಕ ಚರ್ಚೆ ನಡೆಸಿದ್ದಾರೆ ಎಂದರು.

ಎಐಸಿಸಿಯಿಂದ ಮನವೊಲಿಸಲು ಪ್ರಯತ್ನ: ಅತೃಪ್ತ ಸಭೆ ನಡೆಯುತ್ತಿದ್ದಂತೆ ಎಚ್ಚೆತ್ತ ಹೈಕಮಾಂಡ್, ಎಐಸಿಸಿ ಕಾರ್ಯದರ್ಶಿ ಮಾಣಿಕ್ಯಂ ಠಾಗೋರ್, ವಿಷ್ಣುನಾಥನ್ ಅವರನ್ನು ಎಚ್.ಕೆ.ಪಾಟೀಲರ ಮನೆಗೆ ಕಳುಹಿಸಿ ಅತೃಪ್ತರೊಂದಿಗೆ ಸಭೆ ನಡೆಸಿದ್ದಾರೆ. ಮುಂದಿನ ದಿನದಲ್ಲಿ ಎಚ್.ಕೆ. ಪಾಟೀಲ್ ಅವರಿಗೆ ಸಚಿವ ಸ್ಥಾನ ದೊರೆಯುವುದು ಖಚಿತ. ಇವರೊಂದಿಗೆ ಅತೃಪ್ತ ಶಾಸಕರಿಗೆ ಸಂಪುಟ ಪುನಾರಚನೆ ವೇಳೆ ಅವಕಾಶ ಸಿಗಲಿದೆ. ಆದ್ದರಿಂದ ಬಂಡಾಯವೇಳಬಾರದು ಎಂದು ಮನವಿ ಮಾಡಿದ್ದಾರೆ. ಇದಕ್ಕೆ ಎಚ್.ಕೆ ಪಾಟೀಲ್ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

> ಎಚ್.ಕೆ.ಪಾಟೀಲ್ ಪಕ್ಷದ ಹಿರಿಯರು. ಸಚಿವ ಸ್ಥಾನ ಕೈತಪ್ಪಿದ್ದಕ್ಕೆ ಅವರು ಅಸಮಾಧಾನಗೊಂಡಿಲ್ಲ. ಬದಲಿಗೆ ಬಂಡಾಯ ಶಾಸಕರಿಗೆ ಅವರೇ ಕರೆ ಮಾಡಿ ಸಮಾಧಾನ ಮಾಡುವ ಕೆಲಸ ಮಾಡುತ್ತಿದ್ದಾರೆ. ಬುಧವಾರ ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ ಎಚ್.ಕೆ. ಪಾಟೀಲರನ್ನು ಭೇಟಿಯಾಗಿ ಚರ್ಚಿಸಲಿದ್ದಾರೆ.
>
> **- ಜಿ.ಸಿ.ಚಂದ್ರಶೇಖರ್** ರಾಜ್ಯಸಭಾ ಸದಸ್ಯ

> ಎಐಸಿಸಿ ಕಾರ್ಯದರ್ಶಿಗಳೊಂದಿಗೆ ಚರ್ಚೆ ನಡೆಸಿದ್ದೇವೆ. ನಾವೆಲ್ಲ ಸಮಾನಮನಸ್ಕ ಶಾಸಕರು. ನಮ್ಮ ಅನಿಸಿಕೆಗಳನ್ನು ಎಐಸಿಸಿ ಕಾರ್ಯದರ್ಶಿಗಳಿಗೆ ತಿಳಿಸಿದ್ದೇವೆ. ನಮ್ಮ ಅಭಿಪ್ರಾಯವನ್ನು ಹೈಕಮಾಂಡ್ ಗಮನಕ್ಕೆ ತರುವ ಭರವಸೆ ನೀಡಿದ್ದಾರೆ. ಆದ್ದರಿಂದ ಬಂಡಾಯದ ಪ್ರಶ್ನೆಯಿಲ್ಲ.
>
> **- ಈಶ್ವರ ಖಂಡ್ರೆ**, ಮಾಜಿ ಸಚಿವ

ಮೃತರ ಕುಟುಂಬಕ್ಕೆ ಪರಿಹಾರ ನೀಡಲಾಗಿದೆ

ವಿಶ್ವವಾಣಿ ಸುದ್ದಿಮನೆ ಹುಬ್ಬಳ್ಳಿ

ರಾಜ್ಯದಲ್ಲಿ ಮಳೆ ಅವಾಂತರದಿಂದ 104 ಮಂದಿ ಮೃತಪಟ್ಟಿದ್ದು, ಬಹುತೇಕ ಮೃತರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಲಾಗಿದೆ ಎಂದು ಕಂದಾಯ ಮತ್ತು ಕೌಶಲ್ಯ ಅಭಿವೃದ್ಧಿ ಸಚಿವ ಆರ್. ವಿ.ದೇಶಪಾಂಡೆ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಧಾರವಾಡ ಜಿಲ್ಲೆಯಲ್ಲೂ ಮಳೆ ಅವಾಂತರದಿಂದ ಮೃತಪಟ್ಟವರ ಕುಟುಂಬಕ್ಕೆ ಪರಿಹಾರ ನೀಡಲಾಗಿದೆ. ಕೆಲವು ತಾಂತ್ರಿಕ ಕಾರಣದಿಂದ ಒಂದು ಕುಟುಂಬಕ್ಕೆ ಮಾತ್ರ ಪರಿಹಾರ ನೀಡುವುದು ಬಾಕಿ ಇರುವುದಾಗಿ ಜಿಲ್ಲಾಧಿಕಾರಿ ಮಾಹಿತಿ ನೀಡಿದ್ದು, ಅದನ್ನು ಕೂಡಲೇ ನೀಡಲಾಗುವುದು ಎಂದರು.

ಈಗಾಗಲೇ ಬೆಂಗಳೂರಿನಲ್ಲಿ ಅಧಿಕಾರಿಗಳ ಜತೆ ಸಭೆ ನಡೆಸಿ ಮಳೆಯಿಂದಾಗುವ ಅನಾಹುತಗಳ ಕುರಿತು ಮುಂಜಾಗ್ರತೆ ಕ್ರಮ ಕೈಗೊಳ್ಳಲು ಸೂಚಿಸಿದ್ದೇನೆ. ತುರ್ತು ಸಂದರ್ಭದಲ್ಲಿ ಕೈಗೊಳ್ಳಬೇಕಾದ ಕಾರ್ಯ ಹಾಗೂ ಪರಿಹಾರದ ಕುರಿತು ತಿಳಿಸಲಾಗಿದ್ದು, ಮಳೆಯಿಂದಾದ ಹಾನಿಯ ಕುರಿತು ಸಂತ್ರಸ್ತ ಕುಟುಂಬಗಳಿಗೆ ಪರಿಹಾರ ನೀಡುವ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಸೂಚನೆ ನೀಡಿದ್ದೇನೆ. ಸಚಿವನಾದ ನಂತರ ಇದೇ ಮೊದಲ ಬಾರಿಗೆ ಬೆಳಗಾವಿ ವಿಭಾಗದ 7 ಜಿಲ್ಲೆಯ ಅಧಿಕಾರಿಗಳ ಜತೆ ಸಭೆ ನಡೆಸಿ, ಮಳೆಯಿಂದಾದ ಹಾನಿಯ ಕುರಿತು ಚರ್ಚಿಸಲಾಗುವುದು ಎಂದರು.



> ಕೆಪಿಸಿಸಿ ಅಧ್ಯಕ್ಷ ಹುದ್ದೆ ನೇಮಕದ ವಿಷಯ ಕುರಿತು ಕಾಂಗ್ರೆಸ್‌ನಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ಬಣಗಳ ಮಧ್ಯೆ ಆಂತರಿಕ ಕಲಹ ಏರ್ಪಟ್ಟಿದೆ ಎನ್ನುವುದೆಲ್ಲ ಸತ್ಯಕ್ಕೆ ದೂರದ ಸಂಗತಿ. ನಾವೆಲ್ಲರೂ ಒಗ್ಗಟ್ಟಾಗಿದ್ದು, ಹೈಕಮಾಂಡ್ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಯಾರನ್ನು ನೇಮಕ ಮಾಡುತ್ತದೆಯೋ ಅವರನ್ನು ಒಪ್ಪಿಕೊಳ್ಳುತ್ತೇವೆ.
>
> **- ಆರ್.ವಿ.ದೇಶಪಾಂಡೆ** ಕಂದಾಯ ಮತ್ತು ಕೌಶಲ್ಯ ಅಭಿವೃದ್ಧಿ ಸಚಿವ

ನಮ್ಮ ಮನೆ ಸಮಸ್ಯೆ ಪರಿಹರಿಸಿಕೊಳ್ಳುತ್ತೇವೆ

ಧಾರವಾಡ: ಮಾಜಿ ಸಚಿವ ಎಂ.ಬಿ.ಪಾಟೀಲ ಅವರು ನಮ್ಮ ಪಕ್ಷದ ಹಿರಿಯ ಮುಖಂಡರು. ಹೈಕಮಾಂಡ್ ನಿರ್ದೇಶನದಂತೆ ನಾನು ಸಚಿವನಾಗಿದ್ದೇನೆ. ಪಾಟೀಲರಿಗೆ ಸಚಿವ ಸ್ಥಾನ ಕೈ ತಪ್ಪಿರುವುದಕ್ಕೆ ನೋವಾಗಿರುವುದು ಸಹಜ. ಅದರಿಂದ ಅವರೇನು ಪಕ್ಷ ವಿರೋಧಿ ಚಟುವಟಿಕೆ ನಡೆಸುವಷ್ಟು ಕೆಟ್ಟ ಮಟ್ಟಕ್ಕೆ ಹೋಗುವುದಿಲ್ಲ. ಇದು ನಮ್ಮ ಮನೆಯ ಸಮಸ್ಯೆ. ಇದನ್ನು ನಾವೇ ಬಗೆಹರಿಸಿಕೊಳ್ಳುತ್ತೇವೆ ಎಂದು ಕಂದಾಯ ಸಚಿವ ಆರ್.ವಿ.ದೇಶಪಾಂಡೆ ಹೇಳಿದರು.

ಅಣ್ವಸ್ತ್ರ ನಿಶ್ಶಸ್ತ್ರೀಕರಣದತ್ತ ಹೆಜ್ಜೆ ಹಾಕಿದ ಕಿಮ್-ಟ್ರಂಪ್

← ಮೊದಲಪುಟದಿಂದ

ಸಿಂಗಾಪುರದ ಸೆಂತೋಸಾ ದ್ವೀಪದಲ್ಲಿ ನಡೆದ ಶೃಂಗ ಸಭೆಯಲ್ಲಿ ಭಾಗವಹಿಸಿದ್ದ ಈ ಇಬ್ಬರು ನಾಯಕರು, ಪರಸ್ಪರ ಭೇಟಿಯಾಗಿ ದ್ವಿಪಕ್ಷೀಯ ಮಾತುಕತೆ ನಡೆಸಿದ್ದು, ಉಭಯ ದೇಶಗಳ ಪಾಲಿಗೆ ಇದು ಐತಿಹಾಸಿಕ ಕ್ಷಣವಾಗಿದೆ. ಈ ಇಬ್ಬರು ನಾಯಕರ ಭೇಟಿ ಹಾಗೂ ಸ್ನೇಹ ಸಂಬಂಧ ವೃದ್ಧಿಯ ಕುರಿತು ಜಾಗತಿಕ ಮಟ್ಟದಲ್ಲಿ ವ್ಯಾಪಕ ಪ್ರಶಂಸೆ ವ್ಯಕ್ತವಾಗಿದೆ. ಇದರೊಂದಿಗೆ ಮೂರನೇ ಮಹಾ ಯುದ್ಧದ ಕಾರ್ಮೋಡ ಕರಗಿ ಶಾಂತಿ ಸ್ಥಾಪನೆಯ ಸೂಚನೆಗಳು ಸ್ಪಷ್ಟವಾಗಿವೆ.

ಉಭಯರ ಮೊದಲ ಮಾತು: ಇದೇ ಮೊದಲ ಬಾರಿಗೆ ಮುಖಾಮುಖಿ ಭೇಟಿಯಾದ ಟ್ರಂಪ್ ಹಾಗೂ ಕಿಮ್ ಹಸ್ತಲಾಘವ ಮಾಡಿ ವಿಶ್ವಕ್ಕೆ ಸಕಾರಾತ್ಮಕ ಸಂದೇಶ ರವಾನಿಸಿದರು. ಇಬ್ಬರು ನಾಯಕರು ಮುಖಾಮುಖಿ ಆಗುತ್ತಿದ್ದಂತೆ ಮಾತು ಆರಂಭಿಸಿದ ಕಿಮ್, 'ನೈಸ್ ಟು ಮೀಟ್ ಯು ಮಿ. ಪ್ರೆಸಿಡೆಂಟ್' ಎಂದು ಹೇಳಿದರು. ಇದಕ್ಕೆ ಪ್ರತಿಯಾಗಿ ಟ್ರಂಪ್, 'ಈ ಭೇಟಿ ನನಗೆ ಒಂದು ಗೌರವ, ಮುಂದಿನ ದಿನಗಳಲ್ಲಿ ನಾವು ಉತ್ತಮ ಸ್ನೇಹ ಬೆಳೆಸಲಿದ್ದೇವೆ. ಇದರಲ್ಲಿ ನನಗೆ ಯಾವುದೇ ಅನುಮಾನವಿಲ್ಲ' ಎಂದು ತಿಳಿಸಿದರು. ನಂತರ ಉಭಯ ನಾಯಕರು ಸುಮಾರು 40 ನಿಮಿಷಗಳ ಕಾಲ ಹೋಟೆಲ್‌ನ ಆವರಣದಲ್ಲಿ ಓಡಾಡಿಕೊಂಡು ಮಾತುಕತೆ ನಡೆಸಿ, ನಂತರ ಚರ್ಚಾ ಕೋಣೆ ಪ್ರವೇಶಿಸಿದರು.

ಅಣ್ವಸ್ತ್ರ ನಿಶ್ಶಸ್ತ್ರೀಕರಣ: ಜಂಟಿ ಹೇಳಿಕೆ: ಡೊನಾಲ್ಡ್ ಟ್ರಂಪ್ ಹಾಗೂ ಕಿಮ್ ಜೊಂಗ್ ಉನ್ ಅಣ್ವಸ್ತ್ರ ನಿಶ್ಶಸ್ತ್ರೀಕರಣಕ್ಕೆ ಸಂಬಂಧಿಸಿದಂತೆ ಜಂಟಿ ಹೇಳಿಕೆಗೆ ಸಹಿ ಹಾಕಿದ್ದಾರೆ. ಈ ಹೇಳಿಕೆಯಲ್ಲಿ ಉತ್ತರ ಕೊರಿಯಾ ತನ್ನ ಅಣ್ವಸ್ತ್ರ ಕ್ಷಿಪಣಿಗಳನ್ನು ನಿಷ್ಕ್ರಿಯಗೊಳಿಸುವುದು ಹಾಗೂ ಅಮೆರಿಕ ಭದ್ರತೆಯ ಖಾತರಿಗೆ ಸಂಬಂಧಿಸಿದ ವಿಚಾರವಾಗಿ ಜಂಟಿ ಹೇಳಿಕೆಯಲ್ಲಿ ಸಹಿ ಹಾಕಲಾಗಿದೆ.



ಕಲಬುರಗಿ ಹಂತಕರನ್ನು ಈಗಲಾದ್ರೂ ಬಂಧಿಸಲಿ

ಧಾರವಾಡ: ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರ ಸರಕಾರವಾದರೂ ಎಂ.ಎಂ.ಕಲಬುರ್ಗಿ ಹಂತಕರನ್ನು ಪತ್ತೆ ಮಾಡಲಿ ಎಂದು ಕಲಬುರಗಿ ಅವರ ಪತ್ನಿ ಉಮಾದೇವಿ ಆಗ್ರಹಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಎಸ್‌ಐಟಿ ತಂಡ ವಿಜಯಪುರದಲ್ಲಿ ಗೌರಿ ಲಂಕೇಶ ಹತ್ಯೆಯ ಆರೋಪಿಗಳನ್ನು ಬಂಧಿಸಿರುವುದು ಸಕಾರಾತ್ಮಕ ಬೆಳವಣಿಗೆ. ಇದೇ ರೀತಿ ಕಲಬುರಗಿ ಪ್ರಕರಣದಲ್ಲಿ ಪೊಲೀಸರು ಕೆಲಸ ಮಾಡಬೇಕಿದೆ ಎಂದರು. ಹಂತಕರ ಹತ್ಯೆ ಕುರಿತು ಮೂರು ವರ್ಷವಾದರೂ ಯಾವುದೇ ಪ್ರಗತಿ ಕಂಡಿಲ್ಲ. ಇದರಿಂದ ನಾವು ಕೂಡ ತನಿಖೆ ಚುರುಕು ಆಗಲಿ ಎಂದುಕೊಂಡೇ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದೇವೆ. ಆದರೆ, ಸುಪ್ರೀಂ ಕೋರ್ಟ್‌ನಿಂದ ಈವರೆಗೆ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಆಗ ಗೃಹ ಸಚಿವರಾಗಿದ್ದ ಪರಮೇಶ್ವರ ಅವರೇ ಈಗ ಗೃಹ ಮಂತ್ರಿಯಾಗಿದ್ದಾರೆ. ಈಗಿನ ಸರಕಾರ ಆದಷ್ಟು ಬೇಗ ಹಂತಕರ ಪತ್ತೆ ಮಾಡಬೇಕು ಎಂದು ಒತ್ತಾಯಿಸಿದರು.

ಗೌರಿ ಹತ್ಯೆ: ಪ್ರಮುಖ ಆರೋಪಿ ಪರಶುರಾಮ್ ಸೆರೆ

← ಮೊದಲಪುಟದಿಂದ

ಇದಕ್ಕೆ ಆರೋಪಿ ಸ್ವಾಮಿ ವಕೀಲರನ್ನು ನೇಮಕ ಮಾಡಿಕೊಳ್ಳುವುದಾಗಿ ನ್ಯಾಯಾಧೀಶರಿಗೆ ತಿಳಿಸಿದ್ದಾನೆ. ನಂತರ 2017 ಸೆಪ್ಟೆಂಬರ್ 5 ರಂದು ಪರಶುರಾಮನೇ ಗೌರಿ ಅವರಿಗೆ ಗುಂಡು ಹಾರಿಸಿದ್ದು ಎಂದಿರುವ ಪೊಲೀಸರು ಸ್ಕೂಟರ್ ಚಲಾಯಿಸುತ್ತಿದ್ದ ಮತ್ತೊಬ್ಬ ಆರೋಪಿ ನಾಪತ್ತೆಯಾಗಿದ್ದಾನೆ ಎಂದು ಮಾಹಿತಿ ನೀಡಿದ್ದಾರೆ.

ಗೌರಿಗೆ ಗುಂಡಿಕ್ಕಿ ಹತ್ಯೆ ಮಾಡಿದ್ದು ಈತನೆ?: ಆರೋಪಿ ಪರಶುರಾಮ್ ವಾಗ್ಮೋರೆಯೇ ಗೌರಿ ಲಂಕೇಶ್ ಅವರಿಗೆ ಗುಂಡಿಕ್ಕಿ ಹತ್ಯೆ ಮಾಡಿರುವ ಶಂಕೆಯನ್ನು ಎಸ್‌ಐಟಿ ಅಧಿಕಾರಿಗಳು ಹೊಂದಿದ್ದು, ಈ ಬಗ್ಗೆ ವಿಚಾರಣೆಗೆ ಒಳಪಡಿಸಿ ನಂತರ ಗೌರಿ ಹತ್ಯೆ ನಡೆದ ರಾಜರಾಜೇಶ್ವರಿನಗರದ ಮನೆ ಮುಂದೆ ಆರೋಪಿಯನ್ನು ಕರೆತಂದು ಪಂಚನಾಮೆ ನಡೆಸಲಿದ್ದಾರೆ ಎಂದು ತಿಳಿದು ಬಂದಿದೆ.

ಆರೋಪಿ ಶ್ರೀರಾಮಸೇನೆಯ ಕಾರ್ಯಕರ್ತ?: ಪರಶುರಾಮ್ ಶ್ರೀರಾಮಸೇನೆ ಸಂಘಟನೆಯ ಕಾರ್ಯಕರ್ತ ಎನ್ನಲಾಗಿದೆ. ಆದರೆ, ಈ ಆರೋಪವನ್ನು ಶ್ರೀರಾಮಸೇನೆ ಅಧ್ಯಕ್ಷ ಪ್ರಮೋದ್ ಮುತಾಲಿಕ್ ತಳ್ಳಿ ಹಾಕಿದ್ದಾರೆ. ನಮ್ಮ ಸಂಘಟನೆಗೆ ನೂರು ಜನ ಬರುತ್ತಾರೆ -ನೂರು ಜನ ಹೋಗುತ್ತಾರೆ. ಪರಶುರಾಮ್ ಯಾರು ಎಂಬುದರ ಬಗ್ಗೆ ಮಾಹಿತಿ ಇಲ್ಲ. ಈ ಬಗ್ಗೆ ರಾಜ್ಯ ಸರಕಾರ ಸೂಕ್ತ ತನಿಖೆ ನಡೆಸಬೇಕು ಎಂದು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದಾರೆ.

ಅಲ್ಲದೇ ಆರೋಪಿ ಪರಶುರಾಮ್ 2012ರಲ್ಲಿ ಸಿಂಧಗಿ ತಹಸೀಲ್ದಾರ್ ಕಚೇರಿ ಮುಂದೆ ಪಾಕಿಸ್ತಾನ ಧ್ವಜ ಹಾರಿಸಿ ಬಸ್‌ಗೆ ಕಲ್ಲು ತೂರಾಟ ನಡೆಸಿದ ಆರೋಪಿಗಳ ಪೈಕಿ ಈತ ಆರನೇ ಆರೋಪಿಯಾಗಿದ್ದಾನೆ.

ಮಗನ ಬಂಧನ ಸುದ್ದಿ ತಿಳಿದ ತಾಯಿಗೆ ಆಘಾತ: ತಮ್ಮ ಮಗ ಪರಶುರಾಮ್ ವಾಗ್ಮೋರೆಯನ್ನು ಬಂಧಿಸಿರುವ ಸುದ್ದಿ ತಿಳಿದ ಪರಶುರಾಮ್ ತಾಯಿ ಜಾನಕಿಬಾಯಿ ಅಶೋಕ್ ವಾಗ್ಮೋರೆ ಅವರು ಆಘಾತಕ್ಕೆ ಒಳಗಾದರು. ಕೂಡಲೇ ಅವರನ್ನು ಸಿಂಧಗಿಯ ಸರಕಾರಿ ಆಸ್ಪತ್ರೆಗೆ ದಾಖಲಿಸಲಾಯಿತು.

ರಾಹುಲ್ ಗಾಂಧಿಯ ಶಿಕಂಜಿ ಭಾಷಣದ ಸತ್ಯಾಂಶವೇನು?

← ಮೊದಲಪುಟದಿಂದ

ಕೋಕಾ ಕೋಲಾ ಆರಂಭ ಹೇಗೆ?: ಕೋಕಾ ಕೋಲಾ ವೆಬ್‌ಸೈಟ್ ಮಾಹಿತಿ ಪ್ರಕಾರ, 'ಕೋಕಾ ಕೋಲಾ ಉತ್ಪನ್ನ ಮೊದಲು ಆರಂಭವಾಗಿದ್ದು, 1886ರ ಮೇ 8ರಂದು ಜಾರ್ಜಿಯಾದ ಅಟ್ಲಾಂಟದಲ್ಲಿ. ಸ್ಥಳೀಯ ಔಷಧ ತಜ್ಞ ಜಾನ್ ಸ್ಟಿತ್ ಪೆಂಬರ್ಟನ್ ಎಂಬಾತ ಮೊದಲು ಈ ಸೋಡಾ ಮಿಶ್ರಿತ ಸಿರಪ್ ಅನ್ನು ಕಂಡು ಹಿಡಿದ. ನಂತರ ರಸ್ತೆ ರಸ್ತೆಗೆ ಹೋಗಿ ಅದರ ರುಚಿಯನ್ನು ಜನರಿಗೆ ನೀಡಿದ. ಜನರಿಂದ ಉತ್ತಮ ಪ್ರತಿಕ್ರಿಯೆ ಬಂದ ನಂತರ ಒಂದು ಲೋಟ ಕೊಕಾ ಕೋಲಾಕ್ಕೆ ಐದು ಸೆಂಟ್ ಬೆಲೆಯಲ್ಲಿ ಮಾರಾಟ ಮಾಡಿದ.' ಆದರೆ ರಾಹುಲ್ ಗಾಂಧಿ, 'ಶಿಕಂಜಿ ಸಕ್ಕರೆ ಮಿಶ್ರಿತ ನೀರನ್ನು ಅಮೆರಿಕದಲ್ಲಿ ಮಾರಾಟ ಮಾಡಿದ. ಆತನ ಪರಿಶ್ರಮ ಹಾಗೂ ಕೌಶಲಕ್ಕೆ ಅಮೆರಿಕದಲ್ಲಿ ಗೌರವ ನೀಡಲಾಯಿತು. ಹಣ ಹರಿದು ಬಂದಿತು. ಆ ಮೂಲಕ ಕಂಪನಿ ಆರಂಭವಾಯಿತು' ಎಂದು ತಮ್ಮ ಭಾಷಣದಲ್ಲಿ ವಿವರಿಸಿದ್ದರು.

ಫೋರ್ಡ್, ಹೋಂಡಾ, ಕಂಪನಿ ಆರಂಭಿಸಿದ್ದು ಯಾರು?

ಬ್ರಿಟಾನಿಕಾ ಜಾಲತಾಣದ ಮಾಹಿತಿ ಪ್ರಕಾರ ಫೋರ್ಡ್ ಕಂಪನಿ ಸಂಸ್ಥಾಪಕ ಹೆನ್ರಿ ಫೋರ್ಡ್ ಎಂಟು ವರ್ಷಗಳ ಕಾಲ ಒಂದು ಕೊಠಡಿಯ ಶಾಲೆಯಲ್ಲಿ ಓದಿದರು. 16ನೇ ವಯಸ್ಸಿನಲ್ಲಿ ಡೆಟ್ರಾಯಿಟ್ ಯಂತ್ರೋಪಕರಣ ಅಂಗಡಿಯಲ್ಲಿ ಕೆಲಸಕ್ಕೆ ಸೇರಿದರು. ಇನ್ನು ಹೋಂಡಾ ಮೋಟಾರ್ ಕಂಪನಿ ಮಾಲೀಕ ಸೊಯ್‌ಚಿರೋ ಹೋಂಡಾ ಟೊಕಿಯೋದಲ್ಲಿ 15ನೇ ವಯಸ್ಸಿಗೆ ಮೆಕಾನಿಕ್ ಆಗಿ ಕೆಲಸಕ್ಕೆ ಸೇರಿ ಆರು ವರ್ಷಗಳ ನಂತರ ತನ್ನದೇ ಆದ ರಿಪೇರಿ ಅಂಗಡಿ ಆರಂಭಿಸಿದರು. ಮರ್ಸಿಡಸ್ ಕಂಪನಿಯ ವೆಬ್‌ಸೈಟಿನ ಪ್ರಕಾರ ಕಂಪನಿಯ ಸಂಸ್ಥಾಪಕರಾದ ಗೊಟ್ಲಿಬ್ ಡೈಲ್ಮರ್ ಹಾಗೂ ಕಾರ್ಲ್ ಬೆಂಜ್ ಅವರು ಮೂಲತಃ ಎಂಜಿನಿಯರ್‌ಗಳಾಗಿದ್ದಾರೆ.

ಜಿಲ್ಲಾ ಪಂಚಾಯತ್, ತುಮಕೂರು
ಜಿಲ್ಲಾ ಅಧಿಕಾರಿಗಳ ಕಾರ್ಯಾಲಯ
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ತುಮಕೂರು
ದೂರವಾಣಿ: 0816-2273724 E-mail:domtumkur@gmail.com
1ನೇ ಅಡ್ಡರಸ್ತೆ, 1ನೇ ಮುಖ್ಯರಸ್ತೆ, ಗಾಂಧಿನಗರ, ತುಮಕೂರು-572102
ಸಂಖ್ಯೆ:ಅಸಂಕಇ/ತು/ಹೊರಸಂಪನ್ಮೂಲ/ಸಿಆರ್-46/2018-19 ದಿನಾಂಕ:07.06.2018

ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ವಸತಿಶಾಲೆ/ಕಾಲೇಜು, ಜಿಲ್ಲಾ ಕಛೇರಿ ಮತ್ತು ಮಾಹಿತಿ ಕೇಂದ್ರ ಸಿಬ್ಬಂದಿಯ ಸೇವೆಯನ್ನು ಹೊರಸಂಪನ್ಮೂಲದ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್ ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. (1) ಟೆಂಡರ್ ಇಟ್ಟ ಮೊತ್ತ ರೂ. 166.93 ಲಕ್ಷ ಹಾಗೂ ಇ.ಎಮ್.ಡಿ. ಮೊತ್ತ ರೂ 2.50 ಲಕ್ಷಗಳು. (2) ಟೆಂಡರ್ ಫಾರಂ ಅಪ್ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ: 11.06.2018. (3) ಇ-ಪ್ರೊಕ್ಯೂರ್‌ಮೆಂಟ್ ಮೂಖಾಂತರ ಅರ್ಹ ಅರ್ಜಿ ದಾರರ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ :10.07.2018. ಸಮಯ: 3.00 ಘಂಟೆ (4) ತಾಂತ್ರಿಕ ಬಿಡ್ ಅನ್ನು ತೆರೆಯುವ ದಿನಾಂಕ :12.07.2018. ಹೆಚ್ಚಿನ ವಿವರಗಳನ್ನು ಹಾಗೂ ಟೆಂಡರ್ ದಸ್ತಾವೇಜುಗಳನ್ನು ದಿನಾಂಕ:11.06.2018 ರಿಂದ ದಿ:10.07.2018 ರವರೆಗೆ Website:www.proc.karnataka.gov.inನಲ್ಲಿ ಪಡೆಯಬಹುದಾಗಿದೆ. ಹಾಗೂ ಜಿಲ್ಲಾ ಅಧಿಕಾರಿಗಳು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ತುಮಕೂರು ಜಿಲ್ಲೆ. 1 ನೇ ಮುಖ್ಯ ರಸ್ತೆ, 1 ನೇ ಅಡ್ಡ ರಸ್ತೆ ಶಿವನಿಲಯ, ಗಾಂಧಿನಗರ, ತುಮಕೂರು-572102 (ದೂರವಾಣಿ ಸಂಖ್ಯೆ: 0816-2273724) ಇವರನ್ನು ಸಂಪರ್ಕಿಸಬಹುದಾಗಿದೆ.

ಸಹಿ/- ಜಾವಿದ್ ಕೆ ಕರಂಗಿ, ಜಿಲ್ಲಾ ಅಧಿಕಾರಿ,
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ತುಮಕೂರು.
ವಾಸಾಇ/ತುಮಕೂರು/27/ಎಂಸಿಎ/2018-19